# ಮುಳ್ಳಿನ ಮೇಲೆ ನಡೆದು ಅರಳಿದ ಆಲ್‌ರೌಂಡರ್

**ರವೀಂದ್ರ ಜಡೇಜಾ ನಂ.1**



ರವಿಚಂದ್ರನ್ ಅಶ್ವಿನ್ ತರಹದ ದೈವಿಕ ಸ್ಪಿನ್ ಪ್ರತಿಭೆಯ ಸವಾಲಿನೊಟ್ಟಿಗೇ ತನ್ನ ಆಲ್‌ರೌಂಡ್ ಶಕ್ತಿಯನ್ನು ಪದೇ ಪದೇ ಒರೆಗೆಹಚ್ಚಿ ನೋಡುತ್ತಿರುವ ರವೀಂದ್ರ ಜಡೇಜಾ, ಇದುವರೆಗೆ 85 ಟೆಸ್ಟ್ ಇನಿಂಗ್ಸ್‌ಗಳಿಂದ 2370 ರನ್ ಹಾಗೂ 241 ವಿಕೆಟ್‌ಗಳನ್ನು ಪಡೆದಿದ್ದಾರೆ. 2 ಶತಕ, 17 ಅರ್ಧ ಶತಕಗಳು ಬ್ಯಾಟಿಂಗ್ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿ. ಕೆಳಗಿನ ಕ್ರಮಾಂಕದಲ್ಲಿ ಆಡಿ 36.46ರ ಸರಾಸರಿಯಲ್ಲಿ ಟೆಸ್ಟ್ ರನ್‌ಗಳನ್ನು ಗಳಿಸುವುದು ತಮಾಷೆಯಲ್ಲ.

■ **ವಿಶಾಖ ಎನ್.**

‘ಅವನೊಬ್ಬ ಬಿಟ್ಸ್ ಅಂಡ್ ಪೀಸಸ್ ಪ್ಲೇಯರ್’ – ಹೀಗೆಂದು ಸಂಜಯ್ ಮಾಂಜ್ರೇಕರ್ ವರ್ಷಗಳ ಹಿಂದೆ ನೇರಾನೇರ ಟೀಕಿಸಿದ್ದರು. ರವೀಂದ್ರ ಜಡೇಜಾ ಇದನ್ನು ಕೇಳಿಸಿಕೊಂಡು ಸುಮ್ಮನಿರಲಿಲ್ಲ. ಸಾಮಾಜಿಕ ಜಾಲತಾಣದಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದರು. ಮೊನ್ನೆ ಮೊನ್ನೆ ಶ್ರೀಲಂಕಾ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ 175 ರನ್ ಹೊಡೆದು ಔಟಾಗದೆ ಉಳಿದ ದಿನದ ಆಟವನ್ನು ಗಮನಿಸಿದರೆ ಅವರ ಮನೋಬಲ ಎಂಥದೆನ್ನುವುದು ಸ್ಪಷ್ಟವಾಗುತ್ತದೆ. ಇನ್ನು ಅರ್ಧ ಗಂಟೆ ಬ್ಯಾಟಿಂಗ್ ಮಾಡಿದ್ದಿದ್ದರೆ ದ್ವಿಶತಕ ಗಳಿಸುವ ಸಾಧ್ಯತೆ ಇತ್ತು. ಆದರೆ, ಇನಿಂಗ್ಸ್ ಡಿಕ್ಲೇರ್ ಮಾಡಿಕೊಳ್ಳುವ ಸಲಹೆಯನ್ನು ನಾಯಕ ರೋಹಿತ್ ಶರ್ಮಗೆ ತಾವಾಗಿಯೇ ರವಾನಿಸಿದರು. ಪಿಚ್‌ನಲ್ಲಿ ಚೆಂಡು ತಿರುವು ಪಡೆಯುತ್ತಿರುವುದನ್ನು ಮನಗಂಡೇ ಜಡೇಜಾ ಆ ರೀತಿ ನಿಸ್ವಾರ್ಥಿಯಾಗಿ ಯೋಚಿಸಿದ್ದರು.

ವೈಯಕ್ತಿಕ ರನ್ ಗಳಿಕೆ ವಿಷಯದಲ್ಲಿ ಜಡೇಜಾ ನಿಸ್ವಾರ್ಥಿಯಾಗಲು ಅವರು ಬ್ಯಾಟಿಂಗ್ ಮಾಡುವ ಕ್ರಮಾಂಕವೂ ಕಾರಣವಿದ್ದಿರಬಹುದು. ಮೇಲಾಗಿ ಆಲ್‌ರೌಂಡರ್. ಬೌಲರ್ ಆಗಿಯೂ ಪಿಚ್‌ನ ಮರ್ಮ ಗುರುತಿಸಬಲ್ಲರು. ಅಷ್ಟೊಂದು ರನ್‌ಗಳನ್ನು ಹೊಡೆದದ್ದೇ ಅಲ್ಲದೆ ಶ್ರೀಲಂಕಾ ವಿರುದ್ಧದ ಮೊದಲ ಟೆಸ್ಟ್‌ನ ಎರಡೂ ಇನಿಂಗ್ಸ್‌ಗಳಿಂದ ಒಂಬತ್ತು ವಿಕೆಟ್‌ಗಳನ್ನು ಪಡೆದದ್ದೇ ಇದಕ್ಕೆ ಸಾಕ್ಷಿ.

ಜಡೇಜಾರ ಬಾಲ್ಯ ಮುಳ್ಳಿನಹಾದಿ. ತಂದೆ ಅನಿರುದ್ಧ್ ಸಿನ್ಹ ಜಡೇಜಾ ಖಾಸಗಿ ಭದ್ರತಾ ಏಜೆನ್ಸಿಗೆ ವಾಚ್‌ಮನ್ ಆಗಿ ಕೆಲಸ ಮಾಡುತ್ತಿದ್ದರು. ಮಗ ಸೇನೆ ಸೇರಬೇಕೆನ್ನುವುದು ಅವರ ಬಯಕೆಯಾಗಿತ್ತು. ತಾಯಿ ಲತಾಬೇನ್ ಶುಶ್ರೂಷಕಿಯಾಗಿದ್ದವರು. ಸಂಸಾರದ ನೊಗ ಅವರ ಮೇಲೆ. ಇಬ್ಬರು ಅಕ್ಕಂದಿರಲ್ಲಿ ನೈನಾಗೆ ತಮ್ಮನೆಂದರೆ ಬಲು ಪ್ರೀತಿ. ಅವರೇ ಸೈಕಲ್ ಮೇಲೆ ತಮ್ಮನನ್ನು ಕರೆದುಕೊಂಡು ಹೋಗುತ್ತಿದ್ದುದು. ಇನ್ನೊಬ್ಬ ಅಕ್ಕ ಪದ್ಮಿನಿ ಅಮ್ಮನಿಂದ ಚಡಿ ಏಟು ಬೀಳುವುದು ಖರೆ ಎನ್ನುವುದು ಗೊತ್ತಾದ ಕ್ಷಣವೇ ಎಲ್ಲಾದರೂ ಅಡಗಿಕೊಳ್ಳುವ ಜಾಯಮಾನದವರಾಗಿದ್ದರು.

ರವೀಂದ್ರ ಜಡೇಜಾಗೆ ಮನೆಯಿಂದ ಹೊರಗೆ ಹೆಚ್ಚು ಹೊತ್ತು ಇರಲು ಕ್ರಿಕೆಟ್ ನೆಪವಾಯಿತು. ತನಗಿಂತ ದೊಡ್ಡ ವಯೋಮಾನದವರು ಬ್ಯಾಟಿಂಗ್ ಕೊಡುತ್ತಿರಲಿಲ್ಲವೆಂದು ಅವನು ಅಳುತ್ತಿದ್ದುದನ್ನು ಮೊದಲು ಗಮನಿಸಿದ್ದೇ